Misc. 66/2021
RW-1/ಗಂಗಮ್ಮ

<u>ದಿನಾಂಕ 06.03.2025 ರಂದು ಸಾಕ್ಷಿಗೆ ಪ್ರಮಾಣ ವಚನ  ಭೋಧಿಸಲಾಯಿತು.</u>

1. ನಾನು ನನ್ನ ಮುಖ್ಯ ವಿಚಾರಣೆಗೆ ಬದಲಾಗಿ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಸದರಿ ಸಾಕ್ಷಿ ಪ್ರಮಾಣಪತ್ರವನ್ನು ಬರೆಯಲು ಮಾಹಿತಿಯನ್ನು ನಮ್ಮ ವಕೀಲರಿಗೆ ನಾನೇ ನೀಡಿದ್ದೇನೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ಸಂಗತಿಗಳು ಸತ್ಯ ಸಂಗತಿಗಳು ಆಗಿವೆ. ಸದರಿ ಪ್ರಮಾಣಪತ್ರಕ್ಕೆ ನಾನು ನನ್ನ ಸಹಿಯನ್ನು ಹಾಕಿದ್ದೇನೆ.

<u>ದಾಖಲೆಗಳನ್ನು ಗುರುತಿಸುವ ಸಲುವಾಗಿ ಮುಂದುವರೆದ ಮುಖ್ಯ ವಿಚಾರಣೆ ಮಾಡಲು ವಕೀಲರು ಅನುಮತಿ ಕೇಳಿದ್ದಾರೆ. ಅನುಮತಿಯನ್ನು ನೀಡಲಾಗಿದೆ.</u>

<u>ಮುಂದುವರೆದ ಮುಖ್ಯ ವಿಚಾರಣೆಃ-  1 ನೇ ಎದುರುದಾರರ ಪರವಾಗಿ ಶ್ರೀ.ಎಸ್ ಬಿ ಸಿ ವಕೀಲರಿಂದಃ-</u>

2. O.S. 926/2014 ಪ್ರಕರಣದಲ್ಲಿ ಹಾಕಿರುವಂತಹ ತಿದ್ದುಪಡಿ ವಾದಪತ್ರ ಮತ್ತು verification affidavit ಮತ್ತು ಅದೇ ಪ್ರಕರಣದಲ್ಲಿ ಹಾಕಿರುವಂತಹ ಲಿಖಿತ ಹೇಳಿಕೆಯನ್ನು ಮತ್ತು verification affidavit ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಆರ್-1 ರಿಂದ ನಿಆರ್-4 ಎಂದು ಗುರುತಿಸಿದೆ. ನಮ್ಮ ಕುಟುಂಬದ ವಂಶವೃಕ್ಷವನ್ನು ಹಾಜರು ಮಾಡಿದ್ದು ಅದನ್ನು ನಿಆರ್-5 ಎಂದು ಗುರುತಿಸಿದೆ. RTC ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಆರ್-6 ರಿಂದ ನಿಆರ್-30 ಎಂದು ಗುರುತಿಸಿದೆ.

3. ಮಂಡ್ಯ ಗ್ರಾಮಾಂತರ ಗ್ರಾಮ ಪಂಚಾಯತಿಯವರು ನೀಡಿರುವಂತಹ ಅನುಬಂಧ ಎಂಬ ತಲೆಬರಹ ಇರುವ ದಾಖಲೆಗಳನ್ನು ನಿಆರ್-31 ರಿಂದ ನಿಆರ್-37 ಎಂದು ಗುರುತಿಸಿದೆ.

4. ದಿಃ 29.06.2012 ರಂದು ಆಗಿರುವಂತಹ ಕ್ರಯಪತ್ರವನ್ನು ನಿಆರ್-38 ಎಂದು ಗುರುತಿಸಿದೆ. ವಕೀಲರ ನೋಟೀಸಿನ ಕಛೇರಿ ನಕಲನ್ನು ನಿಆರ್-39 ಎಂದು ಮತ್ತು ಅಂಚೆ ರಶೀದಿಗಳನ್ನು ನಿಆರ್-40 ಎಂದು ಮತ್ತು ಅಂಚೆ ಸ್ವೀಕೃತಿ ಪತ್ರಗಳನ್ನು ನಿಆರ್-41 ರಿಂದ ನಿಆರ್-44 ಎಂದು ಗುರುತಿಸಿದೆ. ಮತ್ತೇ ಎರಡು RTC ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಆರ್-45 ಮತ್ತು ನಿಆರ್-46 ಎಂದು ಗುರುತಿಸಿದೆ.

ಆದಕಾರಣದಿಂದ ಪ್ರಾರ್ಥನೆಯಂತೆ ಈ ಪ್ರಕರಣದಲ್ಲಿ ಇರುವಂತಹ ಪರಿಹಾರದ ಹಣದಲ್ಲಿ ನನ್ನ ಭಾಗಾಂಶವಾದ ಹತ್ತನೇ ಒಂದು ಭಾಗಾಂಶವನ್ನು ನನಗೆ ಕೊಡಬೇಕು ಎಂದು ಪ್ರಾರ್ಥಿಸುತ್ತೇನೆ.

ಪಾಟೀ ಸವಾಲುಃ-

ಕಡತವನ್ನು ಪರಿಶೀಲನೆ ಮಾಡಿ ನೋಡಲಾಗಿ ಇತರೆ ಎದುರುದಾರರು ತಮ್ಮ ಲಿಖಿತ ಹೇಳಿಕೆ/claim statement ಹಾಕಿರುವುದಿಲ್ಲ ಮತ್ತು ಈ ದಿನ ಇತರೆ ಎದುರುದಾರರು ಹಾಜರು ಇರುವುದಿಲ್ಲ. ಆದಕಾರಣದಿಂದ ಯಾವುದೇ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.